**ಸಿವ್ಹಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸವಣೂರ.**

**ಅಪರಾಧ ಮೊಕದ್ದಮೆ ಸಂಖ್ಯೆಃ 323/2016**

**ಫಿರ್ಯಾದಿಃ** ಸರಕಾರ (ಸವಣೂರ ಪೋಲೀಸ ಠಾಣೆ)

**ವಿರುದ್ಧ**

**ಆರೋಪಿತರುಃ**

1. ಮಾಂತೇಶ ತಂಃ ಬಸಪ್ಪ ಮರಡೂರ, 45 ವರ್ಷ. ಉಃ ಶೇತ್ಕಿ
   ಸಾಃ ಹೆಸರೂರ ತಾಃ ಸವಣೂರ

2. ಮಲ್ಲವ್ವ ಕೊಂ ಮಾಂತೇಶ ಮರಡೂರ, 40 ವರ್ಷ. ಉಃ ಶೇತ್ಕಿ
   ಸಾಃ ಹೆಸರೂರ ತಾಃ ಸವಣೂರ

4. ಮಹಾದೇವಪ್ಪ ತಂಃ ಶಿವಪ್ಪ ಮಾಡಲಗಿ, 37 ವರ್ಷ. ಉಃ ಕೂಲಿಕೆಲಸ
   ಸಾಃ ನಾರಾಯಣಪೂರ ತಾಃ ಶಿಗ್ಗಾಂವ

5. ಶೇಖಪ್ಪ ತಂಃ ಶಿವಪ್ಪ ಮಾಡಲಗಿ, 28 ವರ್ಷ. ಉಃ ಕೂಲಿಕೆಲಸ
   ಸಾಃ ನಾರಾಯಣಪುರ ತಾಃ ಶಿಗ್ಗಾಂವ

6. ಸುಮಂಗಲಾ ಕೋಂ ವೀರಬದ್ರಪ್ಪ ಗೊಣೆಮ್ಮನವರ, 30 ವರ್ಷ. ಉಃ ಮನೆಗಲಸ
   ಸಾಃ ಕಾಟೇನಹಳ್ಳಿ ಹಾವೇರಿ

7. ದೇವಕ್ಕ ಕೋಂ ಚನ್ನಯ್ಯ ನಂದಿಮಠ, 31 ವರ್ಷ. ಉಃ ಟೇಲರಿಂಗ
   ಸಾಃ ಸದಾಶಿವಪೇಟೆ ತಾಃ ಶಿಗ್ಗಾಂವ

**ದೋಷಾರೋಪಣೆ**

ನಾನು ಬಾಳಾಸಾಹೇಬ ವಡವಡೆ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ.ಗಳು ಸವಣೂರ, ಮೇಲ್ಕಾಣಿಸಿದ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಮೇಲ್ಕಾಣಿಸಿದ ಆರೋಪಿತರಾದ 1, ಮತ್ತು 2 ಹಾಗು 4 ರಿಂದ 7 ನೀವೆಲ್ಲರೂ ದಿಃ 27-06-2015 ರಂದು ಮಧ್ಯಾಹ್ನ 12.30 ಗಂಟೆ ಸುಮಾರಿಗೆ ಪಿರ್ಯಾದಿ ಹಾಗು ಅವರ ಹೆಂಡತಿ ತಮ್ಮ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರಾದ ನೀವೆಲ್ಲರೂ ಅಪರಾಧ ಮಾಡುವ ಏಕೋದ್ದೇಶದಿಂದ ಸಂಗನಮತ ಮಾಡಿಕೊಂಡು ಅಕ್ರಮಕೂಟ ರಚಿಸಿ ಅದರ ಸದಸ್ಯರಾಗಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 143 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಎರಡನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ ದೊಂಬಿ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 147 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಮೂರನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ **ಆರೋಪಿತರಾದ** ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿ, **ಆಯುಧವನ್ನು ಉಪಯೋಗಿಸಿ ದೊಂಬಿ ಮಾಡಿದ್ದು,** ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 148 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ನಾಲ್ಕನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, **ಪಿರ್ಯಾದಿಯ ಹೊಲವನ್ನು ಅತ್ರಿಕಮಣ ಪ್ರವೇಶ ಮಾಡಿದ್ದು** ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 447 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಐದನೇಯದಾಗಿ ಮೇಲ್ಕಾಣಿಸಿದ ದಿನಾಂಕದಂದು ರಾತ್ರಿ 11-00 ಗಂಟೆಗೆ ಆರೋಪಿತರಾದ 1, 3, 4 ಮತ್ತು 5 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಹೆಸರೂರ ಗ್ರಾಮದಲ್ಲಿರುವ ಪಿರ್ಯಾದಿಯ ಮನೆಯನ್ನು ಅತ್ರಿಕಮಣ ಪ್ರವೇಶ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 448 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಆರನೇಯದಾಗಿ ಮೇಲ್ಕಾಣಿಸಿದ ದಿನಾಂಕದಂದು ರಾತ್ರಿ 11-00 ಗಂಟೆಗೆ ಆರೋಪಿತರಾದ 1, 3, 4 ಮತ್ತು 5 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಪಿರ್ಯಾದಿಯ ಮನೆಯನ್ನು ಪ್ರವೇಶ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 451 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಏಳನೇಯದಾಗಿ ಮೇಲ್ಕಾಣಿಸಿದ ದಿನಾಂಕದಂದು ರಾತ್ರಿ 11-00 ಗಂಟೆಗೆ ಆರೋಪಿತರಾದ 1, 3, 4 ಮತ್ತು 5 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಗಾಯ, ಹಲ್ಲೆ ಪಡಿಸಲು ಪಿರ್ಯಾದಿಯ ಮನೆಯನ್ನು ಪ್ರವೇಶ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 452 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಎಂಟನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, **ಪಿರ್ಯಾದಿ ಮತ್ತು ಅವರ ಹೆಂಡತಿಗೆ ಕೈಯಿಂದ ಹೊಡೆದು** ಸಾದಾ ಸ್ವರೂಪದ ಗಾಯ ಪಡಿಸಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಒಂಬತ್ತನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಪಿರ್ಯಾದಿ ಮತ್ತು ಅವರ ಹೆಂಡತಿಗೆ ಬ್ಯಾಕೋಲು ಹಾಗು ಕಲ್ಲಿನಿಂದ ಹೊಡೆದು ಸಾದಾ ಸ್ವರೂಪದ ಗಾಯ ಪಡಿಸಿದ್ದು,

ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಹತ್ತನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 2 ಮತ್ತು 3 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಸಾಕ್ಷಿದಾರ ನಂಃ 4 ನೇದವರು ಮಹಿಳೆ ಅಂತಾ ತಿಳಿದೂ ಅವಳ ತಲೆಗೆ ಹೊಡೆದು ಅವಮಾನ ಪಡಿಸಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 354 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಹನ್ನೊಂದನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಪಿರ್ಯಾದಿಗೆ ಮತ್ತು ಅವರ ಹೆಂಡತಿಗೆ ಲೇ ಸೂಳಿ ಮಕ್ಕಳಾ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿ ಭಂಗವುಂಟು ಮಾಡುವಂತೆ ಉದ್ರೇಕಿಸಿ ಅವರ ಮಾನಕ್ಕೆ ಕುಂದು ಬರುವಂತೆ ಮಾಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 504 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಹನ್ನೆರಡನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಇವತ್ತ ನಿಮ್ಮನ್ನು ಬಿಡುವದಿಲ್ಲಾ ಅಂತ ಜೀವದ ಬೆದರಿಕೆ ಹಾಕಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 506 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಕೊನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ನೇದವರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಆರೋಪಿ ನಂಃ 1 ಇವರು ಆರೋಪಿ ನಂಃ 4 ರಿಂದ 7 ನೇದವರ ಚಿತಾವಣೆಯಿಂದ ಪಿರ್ಯಾದಿಯ ಹೊಲದಲ್ಲಿ ಅತಿಕ್ರಮಣ ಪ್ರವೇಶ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 109 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞಾನಕ್ಕೆ ಬಂದಿದೆ.

ಆದ್ದರಿಂದ, ಈ ಮೇಲ್ಕಂಡ ಎಲ್ಲಾ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ನೀವು ವಿಚಾರಣೆ ಎದುರಿಸತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

5.6.24

(ಬಾಳಾಸಾಹೇಬ ವಡವಡೆ)
ಸಿ.ನ್ಯಾ ಮತ್ತು ಪ್ರ.ದ.ನ್ಯಾ.ದಂ.ಗಳು ಸವಣೂರ.

ಸವಣೂರ
ದಿನಾಂಕಃ 5-6-24